Sri B. D. JATTI.—That will be considered.

Sri A. R. PANCHAGAVI.—What is the total result of the economy measures in terms of money ?

Sri B. D. JATTI.—The only proposals before Government are the suggestions made by Sri Gorwala. The economy may be to the tune of 6 lakhs.

ಶ್ರೀ ಜಿ. ಎಸ್. ಪುಟ್ಟಣ್ಣ.—ರೆವಿನ್ಯೂ ಇಲಾಖೆಯಲ್ಲಿ ಕಲೆಕ್ಷನ್ ಸೀಜನ್ನಿನಲ್ಲಿ ಇರತಕ್ಕ ಸಿಬ್ಬಂದಿಯ ಜೊತೆಗೆ ಐದಾರು ಜನರನ್ನು ಹೆಚ್ಚಿಗೆ 50-60 ರೂಪಾಯಿಗಳ ಸಂಬಳದ ಮೇಲೆ ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ತಪ್ಪಿಸಲು ಏನು ಕ್ರಮ ಕೈಗೊಂಡಿದ್ದೀರಿ ?

Sri B. D. JATTI.—Wherever we find unnecessary staff, we have to reduce them.

Sri G. N. PUTTANNA.—In addition to the existing staff to serve notices, superfluous staff have been sanctioned. It is a waste. Will the Government abolish them ?

Sri B. D. JATTI.—It is the opinion of the Hon'ble Member. If the Government comes to such a conclusion, we will abolish the posts.

Sri J. B. MALLARADHYA.—Do Government propose to abolish the posts of Divisional Commissioners, who are the fifth wheel in the coach ?

Sri B. D. JATTI.—Not for the present.

Sri G. VENKATAI GOWDA.—Has not Sri Gorwala recommended reduction in the number of revenue districts so as to be consistent with the population, work-load and area and what steps have Covernment taken in this direction ?

Sri B. D. JATTI.—It is under the examination of Government.

ಶ್ರೀ ಯು. ಎಂ. ಮಾದಪ್ಪ.—ಮಂತ್ರಿಗಳ ಪ್ರವಾಸವನ್ನು ಕಡಮೆಮಾಡಲು ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ಬಿ. ಡಿ. ಜತ್ತಿ.—ಎಲ್ಲೆಲ್ಲಿ ಆವಶ್ಯಕವೋ ಅಲ್ಲೆಲ್ಲಾ ಅದನ್ನು ನಿಲ್ಲಿಸಲಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಡಿ. ಟಿ. ಸೀತಾರಾಮರಾವ್.—ವಿತವ್ಯಯ ಮಾಡಬಹುದಾದ ಸಂದರ್ಭಗಳನ್ನು ಕಂಡುಹಿಡಿಯಲು ಏನೇನು ಕಾರ್ಯಕ್ರಮ ಕೈಗೊಂಡಿದ್ದೀರಿ?

ಶ್ರೀ ಬಿ. ಡಿ. ಜತ್ತಿ.—ಎಲ್ಲೆಲ್ಲಿ ಅಗತ್ಯ ಕಾಣುತ್ತದೆಯೋ ಅಲ್ಲಿ ವಿತವ್ಯಯವನ್ನು ತರಲು ಇಲಾಖಾ ಅಧಿಕಾರಿಗಳು ಕಾರ್ಯಕ್ರಮ ಕೈಗೊಳ್ಳುತ್ತಿದ್ದಾರೆ. ಈ ಬಗ್ಗೆ ಸರ್ಕಾರದವರೊಂದು ಸಮಿತಿ ಮಾಡಿದ್ದಾರೆ. ಅಲ್ಲಿಂದ ಶಿಫಾರ್ಸು ಬಂದಮೇಲೆ ಮುಂದಿನ ಕಾರ್ಯಕ್ರಮವನ್ನು ನಡೆಸಲಾಗುತ್ತದೆ.

Sri M. RAMAPPA.—Is it a fact that the previous Inspector General of Police had suggested the abolition of some of the posts of Inspectors ?

Sri B. D. JATTI.—There were some suggestions made by the previous I.G.P. We would take them into consideration while we are reorganising the districts. Wherever necessary, we will reduce the number of posts.

ಶ್ರೀ ಇ. ನಾರಾಯಣಗೌಡ.—ಈಗ N.E.S. ಡೆವಲಪ್‌ಮೆಂಟ್ ಬ್ಲಾಕುಗಳಲ್ಲಿ ಕೆಲಸಕಾರ್ಯಗಳಿಗೆ ತಗಲುವ ವೆಚ್ಚಕ್ಕಿಂತ ಹೆಚ್ಚಿಗೆ ಹಣ ಸಿಬ್ಬಂದಿವರ್ಗಕ್ಕೇ ಖರ್ಚಾಗುತ್ತಿರುವುದರಿಂದ ಅದನ್ನು ಕಡಮೆಮಾಡುವುದಕ್ಕೇನು ಕ್ರಮ ಕೈಗೊಂಡಿದ್ದೀರಿ ?

ಶ್ರೀ ಬಿ. ಡಿ. ಜತ್ತಿ.—ಇದನ್ನು ನಾವೀಗ ಆಲ್ ಇಂಡಿಯಾ ಸೆಟಪ್‌ಮೇಲೆ ಮಾಡಿದ್ದಾಗಿರುತ್ತದೆ. ಅವರಿಗೆ ನಾವು ನಿಮ್ಮ ಅಭಿಪ್ರಾಯದಪ್ರಕಾರ ಶಿಫಾರ್ಸು ಮಾಡಲು ಏರ್ಪಾಡುಮಾಡುತ್ತೇವೆ.

---

## Honorarium to the Chairman, State Khadi and Village Industries Board.

*Q.—68. Sri J. L. KABADI (Indi).—Will the Government be pleased to state :—

the basis on which honorarium of the Chairman of the State Khadi and Village Industries Board is fixed ?

A.—Smt. LEELAVATHI MAGADI (Deputy Minister for Rural Industries).—

(*i*) On the nature of work ;

(*ii*) additional expenditure that the person so appointed would be required to incur on account of his appointment ; and

(*iii*) financial aspect from the point of view of Government and the Institution concerned.

ಶ್ರೀ ಮಂಜಪ್ಪ ಉಳ್ಳಾಳ್.—ಅವರಿಗೆ ಇದನ್ನು ಇನ್ನೂ ಕೊಡದಿರುವುದಕ್ಕೆ ಕಾರಣವೇನು ?

ಶ್ರೀ ಬಿ. ಡಿ. ಜತ್ತಿ.—ಸರ್ಕಾರದಲ್ಲಿನ್ನೂ ಅದರ ಬಗ್ಗೆ ಕೊನೆಯ ತೀರ್ಮಾನವಾಗಿಲ್ಲ. ಆದುದರಿಂದ ಅದನ್ನಿನ್ನೂ ಕೊಡಲಾಗಲಿಲ್ಲ.

ಶ್ರೀ ಮಂಜಪ್ಪ ಉಳ್ಳಾಳ್.—ಎಷ್ಟು ಕೊಡಬೇಕೆಂದಿದ್ದೀರಿ ?

ಅಧ್ಯಕ್ಷರು.—ಸರ್ಕಾರದವರಿನ್ನೂ ಆ ಬಗ್ಗೆ ತೀರ್ಮಾನಮಾಡಿಲ್ಲ. ಕೊಟ್ಟಿಲ್ಲ ಎಂದು ಹೇಳಿದ್ದಾರೆ.

Sri RAMAKRISHNA HEGDE.—May I know what is the honorarium fixed for the Chairman of Khadi and Village Industries Board ?

Sri B. D. JATTI.—I have already replied that it has not been finally decided by the Government of Mysore.

Sri G. B. SHANKAR RAO.—Is it not a fact that the honorarium of the Chairman of the Khadi Board was fixed and the Chairman refused it?

Sri B. D. JATTI.—It was proposed that the honorarium to the Chairman of the Khadi and Village Industries Board should be fixed at Rs. 350 and he feels that it is not sufficient.

ಶ್ರೀಮತಿ ನಾಗರತ್ನಮ್ಮ.—ಸಂಭಾವನೆಯನ್ನು ಸ್ವಭಾವದಮೇಲೆ ನಿಗದಿಮಾಡಿದ್ದಾರೆ ಎಂದು ಹೇಳಿದ್ದಾರೆ. ಸ್ವಭಾವ ಶಾಶ್ವತವೇ? ಕೆಲಸದ ಸ್ವಭಾವದ ಮೇಲೆ ನಿಗದಿ ಮಾಡುತ್ತಾರೋ ಅಥವಾ ಮನುಷ್ಯನ ಸ್ವಭಾವದಮೇಲೆ ಮಾಡುತ್ತಾರೋ?

ಶ್ರೀ ಬಿ. ಡಿ. ಜತ್ತಿ.—ಕೆಲಸದ ಸ್ವಭಾವ ನೋಡಿ ಕೊಡುತ್ತಾರೆ. ಮನುಷ್ಯನ ಸ್ವಭಾವ ನೋಡಿ ಕೊಡುವುದಿಲ್ಲ.

Sri RAMAKRISHNA HEGDE.—May I know how long it will take for the Government to fix the honarorium?

Sri B. D. JATTI.—We are going to decide it very shortly.

Sri G. B. SHANKAR RAO.—May I know from the Government whether the the Chairman is not already serving for the last one year? Is it not desirable that his salary or honorarium must not be less than the honorarium fixed for other Chairmen with similar responsibility and work in other States?

Sri B. D. JATTI.—As far as I know, we have no information regarding the honorarium of chairmen in other States. If the Hon'ble Member knows, we are prepared to take into consideration the honorarium or salary paid in other States?

Sri G. VENKATAI GOWDA.—What is the qualification required for a person to be appointed as Chairman to this Khadi and Village Industries Board?

Sri B. D. JATTI.—The Chairman should be a man who has full faith in Khadi and Village Industries programme. He should have sufficient experience for expansion of these schemes.

Sri V. S. PATIL.—May I know as to whether this payment of honorarium is quite essential for this post?

Sri B. D. JATTI.—If he has to maintain his livelihood very decently, it is necessary.

Sri RAMAKRISHNA HEGDE.—May I know what is the pay fixed for the Secretary of this Board?

Sri B. D. JATTI.—If a separate question is put, I will reply. This question refers to Chairman.

ಶ್ರೀ ಡಿ. ಟಿ. ಸೀತಾರಾಮರಾವ್.—ಪ್ರಶ್ನೆಗೆ ಉತ್ತರವಾಗಿ ಸರ್ಕಾರದವರು ಸಂಭಾವನೆಯನ್ನು ನಿಗದಿಮಾಡಲಾಗಿದೆ ಎಂದು ಹೇಳುತ್ತಾರೆ. ಎಷ್ಟು ದುಡ್ಡು ನಿಗದಿಮಾಡಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ. ಡಿ. ಜತ್ತಿ.—ನಿಗದಿಮಾಡಿದ್ದಾರೆ. ಆದರೆ ಅದು ಎಷ್ಟು ಎಂದು ಇನ್ನೂ ಡಿಕ್ಲೇರ್ ಮಾಡಿಲ್ಲ.

Sri A. R. PANCHAGAVI.—What is the amount claimed by the present Chairman?

Sri B. D. JATTI.—He has not claimed any amount.

Sri RAMAKRISHNA HEGDE.—Will the Chief Minister declare the Honorarium today? The Chief Minister just now said that it has been fixed already but it has not been dec'ared. May I know from the Chief Minister if there is any difficulty in announcing it in this House?

Sri B. D. JATTI.—No, Sir.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರ ಸಂಭಾವನೆಯನ್ನು ಡಿಕ್ಲೇರ್‌ಮಾಡಲಿಕ್ಕೆ ಎಷ್ಟು ವರ್ಷ ಬೇಕು?

ಶ್ರೀ ಬಿ. ಡಿ. ಜತ್ತಿ.—ಕೆಲವು ದಿವಸಗಳೊಳಗೇ ಡಿಕ್ಲೇರ್‌ಮಾಡುತ್ತೇವೆ.

ಶ್ರೀ ಜಿ. ಎಸ್. ಪುಟ್ಟಣ್ಣ.—ಕಾಂಗ್ರೆಸ್ ಫಂಡ್‌ನಿಂದ ಕೊಡುತ್ತೀರೋ ಅಥವಾ ಗೌರ್ನಮೆಂಟ್ ದುಡ್ಡು ಕೊಡುತ್ತೀರೋ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ತಾವೆಲ್ಲರೂಕೂಡ ಆಕ್ಟ್ ಮಾಡಿದ್ದೀರಿ; ಆ ಆಕ್ಟ್ ಪ್ರಕಾರ ಕೊಡಬೇಕು. ಅದು ಕಾಂಗ್ರೆಸ್ ಕನ್‌ಸರನ್‌ಅಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಖಾದಿ ದೇಶಕ್ಕೆ ಸಂಬಂಧಪಟ್ಟದ್ದೆ, ಅಥವಾ ಪಾರ್ಟಿಗೆ ಸಂಬಂಧಪಟ್ಟದ್ದೆ?

ಶ್ರೀ ಬಿ. ಡಿ. ಜತ್ತಿ.—ಖಾದಿ ದೇಶಕ್ಕೆ ಸಂಬಂಧಪಟ್ಟದ್ದು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಖಾದಿ ಬೋರ್ಡ್ ಚೇರ್ಮನ್‌ಆಗಿ ತಮ್ಮ ಪಾರ್ಟಿಯವರನ್ನೇ ನೇಮಕ ಮಾಡಲು ಕಾರಣವೇನು?

ಶ್ರೀ ಬಿ. ಡಿ. ಜತ್ತಿ.—ಪಾರ್ಟಿಯವರನ್ನು ನೇಮಕ ಮಾಡಿಲ್ಲ. ಅವರಿಗೆ ಖಾದಿ ಮತ್ತು ವಿಲೇಜ್ ಇಂಡಸ್ಟ್ರಿ ವಿಷಯ ಗೊತ್ತಿದೆ; ಅದಕ್ಕೋಸ್ಕರ ಮಾಡಿದೆ. Not because he happens to be a Congressman but because he is supposed to be an expert in that work.

Sri M. RAMAPPA.—Is it not a face that Chairman and all members of the Board belong to Congress?

Sri B. D. JATTI.—I have no idea. There may be Congress people or even there may be somebody else.

Sri G. VENKATAI GOWDA.—In answer under clause (*ii*), it is stated that additional expenditure that the person so appointed would be required to incur on account of his appointment is one of the basis for fixing the honorarium. May I know what is the amount that is going to be incurred by him because of his appointment?

ಶ್ರೀ ಬಿ. ಡಿ. ಜತ್ತಿ.—ಇಲ್ಲಿಯೇ ಇದ್ದುಕೊಂಡು ಕೆಲಸಮಾಡಿದರೆ ಕಡಮೆಆಗುತ್ತದೆ. ಹೊರಗಡೆಯಿಂದ ಬಂದರೆ ಜಾಸ್ತಿಆಗುತ್ತದೆ. ಅವರು ಬೇರೆ ಅರೇಂಜ್ ಮೆಂಟ್ ಮಾಡಬೇಕಾಗುತ್ತದೆ.

Sri G. B. SHANKAR RAO.—In answer to a supplementary put by my friend, the Hon'ble the Chief Minister was pleased to mention certain qualifications required to hold the post of Chairman. Does the present person who has been appointed as Chairman possess such qualifications? If so, what is the reason for delay in not fixing his salary?

Mr. SPEAKER.—The delay is something different. If he is not qualified, he would not have been appointed at all.

---

## Works in Harijan Localities covered by N.E.S. Blocks.

*Q.—98. Sri T. HANUMIAH (Challakere).—

Will the Government be pleased to state:—

(*a*) whether they are aware that works such as laying of roads, etc., in Harijan localities are not being undertaken in the areas covered by N.E.S. Blocks;

(*b*) the reasons for not giving the benefit of such schemes to Harijans?

*A.—Sri H. C. LINGA REDDY (Deputy Minister for Planning and Development).—

(*a*) No.

(*b*) There is no bar for undertaking Development activities in the Harijan localities in the areas covered by Community Development Programme. The Block Development Committees are primarily charged with the responsibility of formulating the schemes programmes of the Block keeping in view the felt needs of the public of the area. The only limiting factor for not taking up a particular scheme work in any area locality within a Block could be want of sufficient funds in the Block Budget or that the particular area/locality is already better developed than other areas/localities in the Block.

ಶ್ರೀ ಟಿ. ಹನುಮಯ್ಯ.—ಸ್ವಾಮಿ (*a*) ಪ್ರಶ್ನೆಗೆ "ಇಲ್ಲ" ಎಂದು ಉತ್ತರ ಕೊಟ್ಟಿದ್ದಾರೆ. ಹಾಗಾದರೆ ಕೆಲಸ ಮಾಡುತ್ತಾ ಇಲ್ಲ ಎಂತರೋ?

ಅಧ್ಯಕ್ಷರು.—ಚೆನ್ನಾಗಿ ಓದಿನೋಡಿ. ಮಾಡುತ್ತಾರೆ ಎಂದು ಅರ್ಥವಾಗುತ್ತದೆ.

ಶ್ರೀ ಟಿ. ಹನುಮಯ್ಯ.—ಇಲ್ಲ ಎನ್ನುವುದಕ್ಕೆ ಯಾವುದು ಅರ್ಥ ಎನ್ನುವುದು ಗೊತ್ತಾಗುವುದಿಲ್ಲ. ಕೆಲಸ ನಡೆಸುತ್ತಾ ಇಲ್ಲವೇ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಹರಿಜನ ಕೇರಿಗಳಲ್ಲಿ ರಸ್ತೆ ಹಾಕುವುದು ಮುಂತಾದ ಕಾಮಗಾರಿಗಳನ್ನು ಕೈಗೊಳ್ಳುತ್ತಿಲ್ಲ ಎಂಬ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಾರೆ. ಅದಕ್ಕೆ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿದೆ. ಉತ್ತರ ಸ್ಪಷ್ಟವಾಗಿದೆ.

ಶ್ರೀ ಟಿ. ಹನುಮಯ್ಯ.—ಮಾಡುತ್ತಾ ಇದ್ದಾರೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ —ಹೌದು ಬಂದಿದೆ.

ಶ್ರೀ ಟಿ. ಹನುಮಯ್ಯ.—ಯಾವ ಹರಿಜನ ಕೇರಿಗಳಲ್ಲಿಯೂ N.E.S. ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಬಂದಿಲ್ಲ ಎಂದು ಹೇಳಿದೆ.

ಶ್ರೀ ಬಿ. ರಾಚಯ್ಯ.—ಹರಿಜನ ಬೀದಿಗಳಲ್ಲಿ ರಾಷ್ಟ್ರೀಯ ವಿಸ್ತರಣಾ ಕೆಲಸಕಾರ್ಯಗಳು ನಡೆದಿವೆಯೇ ಅಥವಾ ಇಲ್ಲವೇ ಎನ್ನುವುದಕ್ಕೆ ಇಫರ್ ಮೇಷನ್ ತರಿಸಿಕೊಂಡಿದ್ದೀರಾ? ಎಲ್ಲೆಲ್ಲಿ ನಡೆದಿವೆ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ರಾಷ್ಟ್ರೀಯ ವಿಸ್ತರಣಾ ಯೋಜನೆಯ ಕಾರ್ಯಕ್ರಮಗಳು ಇಡೀ ದೇಶದ ಎಲ್ಲಾ ಹಳ್ಳಿಗಳಿಗೂ ಸಂಬಂಧಪಡುತ್ತವೆ. ಆದರೆ ಡೆವಲಪ್‌ಮೆಂಟ್ ಬ್ಲಾಕುಗಳು ಇರುವ ಕಡೆ ಹರಿಜನ ಕೇರಿಗಳಲ್ಲಿ ಏನು ಕೆಲಸವಾಗಿದೆ ಎಂಬುದಕ್ಕೆ ಪ್ರತ್ಯೇಕವಾಗಿ ಅಂಕಿ ಅಂಶಗಳನ್ನು ತರಿಸಿಲ್ಲ.

ಶ್ರೀ ಬಿ. ಆರ್. ಪರಮೇಶ್ವರಯ್ಯ.—ಬ್ಲಾಕ್ ಡೆವಲಪ್‌ಮೆಂಟ್ ಕಮಿಟಿಗಳಲ್ಲಿ ನಿಮ್ನವರ್ಗದವರ ಪ್ರಾತಿನಿಧ್ಯ ಕಡಮೆಯಾಗಿರುವುದರಿಂದ ಅಲ್ಲಿ ಕೆಲಸ ನಡೆಯುತ್ತಾ ಇಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಹಣ ಇದೆ. ಕಮಿಟಿ ಮೆಂಬರುಗಳು ಇದ್ದಾರೆ. ಅವರು ಎಲ್ಲವನ್ನೂ ತೀರ್ಮಾನಿಸಿಕೊಂಡು ಎಲ್ಲವನ್ನೂ ಮಾಡುವುದಕ್ಕೆ ಅವಕಾಶವಿದೆ ಎಂದು ಗಮನಕ್ಕೆ ಬಂದಿದೆ.

A MEMBER.—May I know whether during your extensive tour in the State, you have come across any N.E.S. being implemented in the Scheduled Caste colonies?